**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ ಕೊಪ್ಪಳ**

ಸಿ.ಸಿ.ನಂಃ 1154/2021

| | |
|---|---|
| CW | 05 |
| PW | 03 |

ದಿನಾಂಕಃ 25-09-2024 ರಂದು **ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | ಮಾರುತಿ |
| ತಂದೆ ಹೆಸರು | ಶಂಕ್ರಪ್ಪ |
| ವಯಸ್ಸು | 36 ವರ್ಷ |
| ಉದ್ಯೋಗ | ಸಿ ಪಿ ಸಿ 369 ಡಿ ಸಿ ಆರ್ ಇ ಕೊಪ್ಪಳ |
| ವಾಸಸ್ಥಳ | ಕೊಪ್ಪಳ |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ನಾನು 2016 ರಿಂದ 2022 ರವರೆಗೆ ಪಿರ್ಯಾದಿ ಠಾಣೆಯಲ್ಲಿ ಪಿ.ಸಿ. ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 09-05-2021 ರಂದು ಸಂಜೆ 06-00 ಗಂಟೆ ಸುಮಾರಿಗೆ ನಾನು ಮತ್ತು ಚಾಸಾ-4 ಹಾಗೂ 6 ರವರು ಠಾಣೆಯಲ್ಲಿದ್ದಾಗ ಚಾಸಾ-1 ರವರು ತಮಗೆ ದೂರವಾಣಿ ಮೂಖಾಂತರ ಕುಣಿಕೇರಿ ಗ್ರಾಮದ ಬಸ್ ಸ್ಟಾಂಡ್ ಹತ್ತಿರ ಆರೋಪಿಯು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಬಾತ್ಮಿ ಬಂದಿದ್ದು ದಾಳಿ ಮಾಡಲು ತನ್ನೊಂದಿಗೆ ಬರುವಂತೆ ನಮಗೆ ಸೂಚಿಸಿರುತ್ತಾರೆ.

ನಂತರ ಚಾಸಾ- 6 ರವರಿಗೆ ಪಂಚರನ್ನು ಬರಮಾಡಿಕೊಂಡು ಬರುವಂತೆ ತಿಳಿಸಿದ್ದು ಅವರು ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಬಂದು ಚಾಸಾ-1 ರವರಿಗೆ ಪರಿಚಿಯಿಸಿ ದಾಳಿಯ ವಿಷಯವನ್ನು ತಿಳಿಸಿರುತ್ತಾರೆ. ನಂತರ ಸಂಜೆ 6-30 ಗಂಟೆಗೆ ಚಾಸಾ-1 ರಿಂದ 4, ನಾನು ಹಾಗೂ ಚಾಸಾ-6 ರವರು ನಮ್ಮ ಇಲಾಖಾ ಜೀಪಿನಲ್ಲಿ ಹೊರಟು ಸಂಜೆ 7-00 ರ ಸುಮಾರಿಗೆ ಗುನ್ನಾ ಸ್ಥಳದ ಸಮೀಪ ಜೀಪನ್ನು ನಿಲ್ಲಿಸಿ ಕಾಲ್ನಡಿಗೆಯಲ್ಲಿ ಹೋಗಿ ನೋಡಲಾಗಿ ಆರೋಪಿಯು ಮದ್ಯ ಮಾರಾಟ ಮಾಡುತ್ತಿದ್ದು ಹಾಗೂ ಖರೀದಿಸಲು ಜನರು ಸೇರಿದ್ದರು. ನಂತರ ಚಾಸಾ-1, ನಾನು ಮತ್ತು ಸಿಬ್ಬಂದಿಗಳು ದಾಳಿ ಮಾಡಿದ್ದು, ನಮ್ಮನ್ನು ನೋಡಿ ಖರೀದಿಸಲು ಬಂದ ಜನರು ಮತ್ತು ಆರೋಪಿತಳು ಓಡಿ ಹೋಗಿರುತ್ತಾರೆ.

ಆಕೆಯ ಬಗ್ಗೆ ವಿಚಾರಿಸಿದಾಗ ಆಕೆಯ ಹೆಸರು ಮಂಜುಳಾ ಎಂದು ತಿಳಿಸಿದ್ದು, ಆಕೆಯ ಬಳಿ ವಿಚಾರಿಸಿದಾಗ ಮದ್ಯ ಮಾರಾಟ ಮಾಡಲು ಯಾವುದೇ ಪರವಾನಿಗೆಯನ್ನು ಹೊಂದಿರಲಿಲ್ಲ. ನಂತರ ಆಕೆಯು ಬಿಟ್ಟು ಹೋಗಿದ್ದ ಈ ಕೆಳಕಂಡ ಟೆಟ್ರಾ ಪ್ಯಾಕೇಟ್ ಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ವಶಪಡಿಸಿಕೊಂಡಿರುತ್ತೇವೆ.

| | |
|---|---|
| 1. | 90 ಎಂ ಎಲ್ ನ ಹೆಚ್ ಸಿ ವಿಸ್ಕಿ 50 ಟೆಟ್ರಾ ಪ್ಯಾಕೇಟ್ ಗಳು. |

ಈ ಮೇಲಿನ ಮದ್ಯದ ಪ್ಯಾಕೇಟ್ ಗಳನ್ನು ಆರೋಪಿಯ ಬಳಿಯಿಂದ ಪಂಚರ ಸಮಕ್ಷಮ ಜಪ್ತಿಮಾಡಿಕೊಂಡು ಸಂಜೆ 07.15 ರಿಂದ 08.15 ರವರೆಗೆ ಪಂಚನಾಮೆಯನ್ನು ಜರುಗಿಸಿ ಗಣಕೀಕೃತಗೊಳಿಸಿ ನಂತರ ಠಾಣೆಗೆ ಬಂದು ಪ್ರಿಂಟ್ ನ್ನು ತೆಗೆದು ಪಂಚರ ಸಹಿಯನ್ನು ಚಾಸಾ-1 ರವರು ಪಡೆದಿರುತ್ತಾರೆ. ಅದೇ ದಿನ ಠಾಣೆಯಲ್ಲಿ ನಾನು ಚಾಸಾ-9 ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ಈ ಪ್ರಕರಣದ ಮುದ್ದೆಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸದರಿ ಆರೋಪಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದನು ಎಂದು ಗುರುತಿಸಿರುತ್ತಾರೆ.

## <u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ಗುನ್ನೆಜಾಗವು ಠಾಣೆಯಿಂದ 12 ರಿಂದ 13 ಕಿ.ಮೀ ಅಂತರ ಇರುತ್ತದೆ. ಗುನ್ನೆಜಾಗಕ್ಕೆ ಗವಿಮಠದ ಹಲವರ್ತಿ ಮೂಲಕ ತಲುಪಿರುತ್ತೇವೆ. ಗುನ್ನೆಜಾಗವು ಸಾರ್ವಜನಿಕ ಪ್ರದೇಶ ಎಂದರೆ ಸರಿ. ದಾಳಿ ಮಾಡುವ ಸಮಯದಲ್ಲಿ ಸುಮಾರು 8 ರಿಂದ 10 ಜನರು ಇದ್ದು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ಗುನ್ನೆಜಾಗದ ಸುತ್ತಮುತ್ತ ಇರುವ ಅಂಗಡಿಯವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಪಂಚನಾಮೆಯನ್ನು ಠಾಣಾ ಬರಹಗಾರರು ಬರೆದಿರುತ್ತಾರೆ. ನಾನು ಯಾವುದೇ ದಾಳಿಮಾಡಿರುವುದಿಲ್ಲ, ಆರೋಪಿ ಯಾವುದೆ ಮದ್ಯ ಮಾರಾಟ ಮಾಡುತ್ತಿರಲಿಲ್ಲ, ಆತನಿಂದ ಯಾವುದೆ ಮು.ಮಾಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಾವು ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿಅಂಶದ ಸಲುವಾಗಿ ದಾಖಲಿಸಲಾದ

ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ.